# 9

# ಉತ್ತರ ರಾಜ್ಯ

## ರೆಹಬ್ಬಾಮನ ಸಿಂಹಾಸನಾರೋಹಣದಿಂದ ಸಮಾರ್ಯದ ಪತನದವರೆಗೆ

## ಕ್ರಿ.ಪೂ. 975-722 (1 ಅರಸುಗಳು 12-22; 2 ಅರಸುಗಳು 1-17)

### I. ಪೀಠಿಕೆ.

ಈ ಹಂತದಿಂದ ವಿಸ್ತಾರವಾಗುತ್ತಿದ್ದ ಹಿಬ್ರೂ ಚರಿತ್ರೆಯು ಎರಡು ನದಿಗಳಾಗಿ ಇಬ್ಭಾಗವಾಗುತ್ತದೆ. ಕಥೆಯು ಅದರ ವಿವರಣೆಗಳಲ್ಲಿ ಹೆಚ್ಚು ಸಮ್ಮಿಶ್ರವಾದದ್ದಾಗುತ್ತದೆ. ಇಲ್ಲಿಯವರೆಗೆ ನಮ್ಮ ಅಧ್ಯಾಯಗಳು ಕಾಲಾನುಕ್ರಮಣಿಕೆಯ ಅವಧಿಗಳಿಗೆ ಸಂಬಂಧಿಸಿದ್ದವು. ಅದೇ ಯೋಜನೆಯು "ಎರಡು ರಾಜ್ಯಗಳು" ಮತ್ತು "ಯೆಹೂದ ಮಾತ್ರ"ದಂತೆ ಈ ಅಧ್ಯಾಯದ ಶಿರೋನಾಮವನ್ನು ಮತ್ತು ಪಠ್ಯವನ್ನು ಕೊಡುತ್ತದೆ; ಆದರೆ ಐತಿಹಾಸಿಕ ಐಕ್ಯತೆಗಾಗಿ ಮತ್ತು ಸರಳತೆಗಾಗಿ ಎರಡೂ ರಾಜ್ಯಗಳನ್ನು ದೇಶವು ವಿಭಾಗವಾದಂತೆ ಬೇರೆಬೇರೆಯಾಗಿ ತಿಳಿದುಕೊಳ್ಳುವುದು ಹೆಚ್ಚು ಉತ್ತಮವಾದದ್ದಾಗಿ ಕಾಣಿಸುತ್ತದೆ.

**1. ಭೇದದ ಮೂಲ.**-*a. ಅದರ ಬೇರುಗಳು.*-"ರಾಜ್ಯವು ಒಡೆಯುವುದು ಒಂದು ದಿನದ ಕೆಲಸವಲ್ಲ ಆದರೆ ಶತಮಾನಗಳ ಬೆಳವಣಿಗೆಯಾಗಿರುತ್ತದೆ." ಯೆಹೋಶುವನಿಂದ ದಾವೀದನವರೆಗೆ ದೀರ್ಘ ಅವಧಿಯಲ್ಲಿ ಯೋಸೇಫನ ಎರಡು ಗೋತ್ರಗಳು (ಎಫ್ರಾಯಿಮ್, ಮನಾಸ್ಸೆ), ಮತ್ತು ಯೆಹೂ ಗೋತ್ರಕ್ಕಿಂತ ಹೆಚ್ಚಾಗಿ ಬೆಂಜಾಮೀನನ ಗೋತ್ರವು ಪ್ರಾಭಲ್ಯತೆ ಹೊಂದಿದ್ದವು. ಎಫ್ರಾಯಿಮ್ ಗೋತ್ರಕ್ಕೆ ಯೆಹೋಶುವ, ದೆಬೋರಾ ಮತ್ತು ಸಮುವೇಲ ಒಳಪಟ್ಟಿದ್ದರು; ಮನಾಸ್ಸೆ ಗೋತ್ರಕ್ಕೆ ಗಿದ್ಯೋನ್ ಮತ್ತು ಅಬಿಮೆಲೇಕ್ ಒಳಗೊಂಡಿದ್ದರು; ಬೆಂಜಾಮಿನ್ ಗೋತ್ರಕ್ಕೆ ಸೌಲ ಮತ್ತು ಯೋನತಾನನು ಒಳಪಟ್ಟಿದ್ದರು.

ಎಫ್ರಾಯೀಮ್ ಗೊತ್ರವು ವಿಶೇಷವಾಗಿ, ಪುನಃ ಪುನಃ ಶ್ರೇಷ್ಠತೆಯ ಮತ್ತು ಸ್ವಾತಂತ್ರ್ಯದ ಗರ್ವದ ಭಾವನೆಯನ್ನು ತೋರಿಸುತ್ತಿತ್ತು;[1] ಯೆಹೂದದ ಆಳ್ವಿಕೆಯಿಂದ ಕಡಿದುಹೋಗಲು ತಮ್ಮ ಸಮಯವನ್ನು ಅದರ ನಾಯಕರು ಕಾದುಕೊಂಡಿದ್ದರೆಂದು ಘಟನೆಗಳು ಸಿದ್ಧಪಡಿಸಿ ತೋರಿಸುತ್ತವೆ.

*b. ರೆಹಬ್ಬಾಮನ ಪಟ್ಟಾಭಿಷೇಕ ಮತ್ತು ರಾಜನೀತಿ.*-"ಸೊಲೊಮೋನನಿಗೆ ಒಂದು ಸಾವಿರ ಹೆಂಡತಿಯರಿದ್ದರು ಮತ್ತು ಒಬ್ಬನೇ ಒಬ್ಬ ಮಗನಿದ್ದನು, ಮತ್ತು ಅವನು ಮೂರ್ಖನಾಗಿದ್ದನು." ರೆಹಬ್ಬಾಮನು ಅರಸನಾದ ಮೇಲೆ ಜನರು ಸೊಲೊಮೋನನ ಆಳ್ವಿಕೆಯಲ್ಲಿ ತಮ್ಮ ಮೇಲೆ ಬಹಳ ಭಾರವಾಗಿ ಹಾಲಿದ ತೆರಿಗೆಯ ಭಾರವನ್ನು ಹಗುರ ಮಾಡಬೇಕೆಂದು ಅವನಿಗೆ ವಿನ್ನವಿಸಿಕೊಂಡರು. ರೆಹಬ್ಬಾಮನು

ತನ್ನ ಹಿರಿಯ ಸಲಹೆಗಾರರ ಬುದ್ಧಿವಾದವನ್ನು ಕಡೆಗಣಿಸಿ ಯುವ ಜನರ ಸಲಹೆಯನ್ನು ಅನುಸರಿಸಿದನು. ತನ್ನ ತಂದೆಯ ನಡುವಿಗಿಂತ ತನ್ನ ಕಿರಿಬೆರಳು ಹೆಚ್ಚು ದಪ್ಪವಾಗಿದೆ ಯೆಂದು ಉತ್ತರ ಕೊಟ್ಟನು.

*c. ಯಾರೊಬ್ಬಾಮನು ಮತ್ತು ದಂಗೆ.*-ಸೊಲೊಮೋನನಿಗೆ ಯಾರೊಬ್ಬಾಮನೆಂಬ ಹೆಸರಿನ ಒಬ್ಬ ಸಮರ್ಥ ಅಧಿಕಾರಿ ಇದ್ದನು. ಅವನು ಎಫ್ರಾಯೀಮ್ಯನಾಗಿದ್ದುದು ಅರ್ಥಗರ್ಭಿತವಾದದ್ದಾಗಿದೆ. ಸೊಲೊಮೋನನ ವಿಗ್ರಹಾರಾಧನೆಯ ನಿಮಿತ್ತ, ಅದು ದೈವಾಡಳಿತೆಯ ಮೂಲ ನಿಯಮವನ್ನು ಉಲ್ಲಂಘಿಸಿದ್ದರಿಂದ, ಪ್ರವಾದಿ ಅಹೀಯನು ರಾಜ್ಯವು ಒಡೆಯಲ್ಪಟ್ಟು, ಹತ್ತು ಕುಲಗಳ ಮೇಲೆ ಯಾರೊಬ್ಬಾಮನು ಎತ್ತರಕ್ಕೇ ರಿಸಲ್ಪಡುವುದರ ಬಗ್ಗೆ ಮುಂತಿಳಿಸಿದ್ದನು. ಯಾರೊಬ್ಬಾಮನು ಸೊಲೊಮೋನನ ಸಂಶಯಕ್ಕೆ ಗುರಿಯಾದನು ಮತ್ತು ಐಗುಪ್ತಕ್ಕೆ ಓಡಿಹೋದನು, ಆದರೆ ಸೊಲೊಮೋ ನನ ಮರಣದ ನಂತರ ಹಿಂದಿರುಗಿ ಬಂದನು. ತೆರಿಗೆಯ ಭಾರ ಕಡಿಮೆ ಮಾಡುವದನ್ನು ರೆಹಬ್ಬಾಮನು ಕಠಿಣವಾಗಿ ತಿರಸ್ಕರಿಸಿದ್ದರಿಂದ, ಯಾರೊಬ್ಬಾಮನು ಹತ್ತು ಕುಲಗಳ ದಂಗೆಗೆ ನಾಯಕನಾದನು. ಇದರ ಪರಿಣಾಮ ಎರಡು ವಿರೋಧಿ ರಾಜ್ಯಗಳಾದವು:

(1) ಯೆಹೂದ ಮತ್ತು ಬೆನ್ಯಾಮಿನ್ ಎರಡು ಕುಲಗಳ ದಕ್ಷಿಣ ರಾಜ್ಯ, **ಯೆಹೂದ** ಎಂದು ಕರೆಯಲ್ಪಟ್ಟಿತು.

(2) **ಇಸ್ರಾಯೇಲ್** ಎಂದು ಕರೆಯಲ್ಪಟ್ಟ ಹತ್ತು ಕುಲಗಳ ಉತ್ತರ ರಾಜ್ಯ.

**2. ಎರಡು ರಾಜ್ಯಗಳು ಹೋಲಿಸಲ್ಪಟ್ಟದ್ದು.**-*a. ಪ್ರದೇಶ ಮತ್ತು ಜನಸಂಖ್ಯೆ.*-ಒಂದು ಮಹತ್ವದ ಅರ್ಥದಲ್ಲಿ, ಉತ್ತರ ರಾಜ್ಯವು ದಕ್ಷಿಣ ರಾಜ್ಯಕ್ಕಿಂತ ಹೆಚ್ಚು ಜನಾಂಗಿಕ ವಾದದ್ದಾಗಿತ್ತು: ಹನ್ನೆರಡು ಕುಲಗಳಲ್ಲಿ ಅದು ಹತ್ತು ಕುಲಗಳನ್ನು ಒಳಗೊಂಡಿತ್ತು, ಆದುದರಿಂದ ಅದು ಇಸ್ರಾಯೇಲ್ ಎಂಬ ಜನಾಂಗಿಕ ಹೆಸರನ್ನು ಉಳಿಸಿಕೊಂಡಿತ್ತು. ಅದರ ಕ್ಷೇತ್ರವು ವಿಶಾಲವಾಗಿತ್ತಲ್ಲದೇ, ವಿಶಾಲವಾಗಿ ಐಶ್ವರ್ಯವುಳ್ಳದ್ದೂ, ನೈಸರ್ಗಿಕ ಮೂಲಗಳಲ್ಲಿಯೂ ಐತಿಹಾಸಿಕ ಸಂಬಂಧಗಳಲ್ಲಿಯೂ ಅಧಿಕವಾದದ್ದಾಗಿತ್ತು. ಯೆಹೂದವು ಯೆರೂಸಲೇಮನ್ನೂ ಹೆಬ್ರೋನನ್ನೂ ಹಿಡಿದು ಕೊಂಡಿರುವಾಗ, ಇಸ್ರಾಯೇಲು ಅದರ ಸ್ಮರಣೆಗಳ ಐಶ್ವರ್ಯದೊಂದಿಗೆ ಶೆಕೆಮನ್ನು ಹೊಂದಿಕೊಂಡಿತ್ತು; ಶಿಲೋವವು ದೇವದರ್ಶನ ಗುಡಾರದ ಮೊದಲಿನ ಮನೆಯಾಗಿತ್ತು; ಬೇತೇಲ್, ರಾಮಾ ಮತ್ತು ಗಿಲ್ಗಾಲಗಳಲ್ಲಿ ಸಮುವೇಲನು ಪ್ರವಾದಿಗಳ ಶಾಲೆಗಳನ್ನು ಸ್ಥಾಪಿಸಿದ್ದನು; ಮತ್ತು ದಾನ್, ಇದು ಬಹಳ ಸಮಯದಿಂದ ಆರಾಧನೆಯ ಸ್ಥಳವಾಗಿತ್ತು (ನ್ಯಾಯಸ್ಥಾಪಕರು 18:14-31). ಹೀಗಿದ್ದರೂ, ದಾವೀದನ ಸಾಮ್ರಾಜ್ಯದ ಅವಲಂಬಿಗಳೂ ಮಿತ್ರ ರಾಜ್ಯಗಳೂ ಕಾದಿಸಲ್ಪಟ್ಟಿರುವವರೆಗೆ, ಹೆಚ್ಚಾಗಿ ಇಸ್ರಾಯೇಲಿಗೆ ಒಳಪಟ್ಟಿದ್ದವು. ಆದರೂ ಸಮಯವು ದಾಟಿಹೋದಂತೆ, ಲೇವಿಯರು ಮತ್ತು ಇತರ ಹೆಚ್ಚು ಆತ್ಮಿಕ ಸಂಗತಿಗಳು ಯೆಹೂದಕ್ಕೆ ವಲಸೆಹೋಗುವದರಿಂದ ಇಸ್ರಾಯೇಲು ಕಳೆದು ಕೊಂಡಿತ್ತು (2 ಪೂರ್ವಕಾಲವೃತ್ತಾಂತ 15:9, 10).

*b. ಅವರ ಧರ್ಮ.*-ಇಸ್ರಾಯೇಲಿನ ಅರಸರು ಮೊದಲಿನಿಂದ ಕಡೆಯವರೆಗೆ ವಿಗ್ರಹಾರಾಧಕರಾಗಿದ್ದರು ಮತ್ತು ಜನರು ಹಾಗೆಯೇ ಹೆಚ್ಚೆಚ್ಚಾಗಿ ಬೆಳೆದು ಬಂದರು. ಆದಾಗ್ಯೂ ಹೆಚ್ಚಾಗಿ ಎಲ್ಲಾ ಮೊದಲಿನ ದೊಡ್ಡ ಪ್ರವಾದಿಗಳು ಇಸ್ರಾಯೇಲಿಗೆ ಒಳಪಟ್ಟಿದ್ದರು ಇಲ್ಲವೇ ಇಸ್ರಾಯೇಲಿಗೆ ನಿಯೋಗಗಳ ಮೇಲೆ ಕಳುಹಿಸಲ್ಪಟ್ಟಿದ್ದರು ಎಂಬುದು ಆಸಕ್ತಿಯುಳ್ಳದ್ದಾಗಿದೆ. ಅಬಿಯ, ಶೆಮೈಯ, ಎಲೀಯ, ಎಲೀಷ. ಮೀಕ, ಯೋನಾ, ಹೋಶೇಯ, ಆಮೋಸ್, ಜೆಕರ್ಯ, ಯೆಹು ಇವರೆಲ್ಲರೂ ಜನನದಿಂದಾಗಲಿ ಅಥವಾ ನಿಯೋಗದಿಂದಾಗಲೀ ಉತ್ತರದ ಪ್ರವಾದಿಗಳಾಗಿದ್ದರು. ಯೆಹೂದವು ಬಹಳ ಸಲ

ವಿಗ್ರಹಾರಾಧಕವಾಗಿದ್ದರೂ, ಎಷ್ಟೋ ಹೆಚ್ಚಾಗಿ ಯೆಹೋವನಿಗೆ ನಿಷ್ಠೆಯಿಂದ ಇತ್ತು.

*c. ಸ್ಥಿರತೆಯ ಮೂಲ ಅಂಶಗಳು.*-ಯೆಹೋದದ ಹೆಚ್ಚು ದೊಡ್ಡ ಸ್ಥಿರತೆಯು ಈ ಕೆಳಗಿನ ಸಂಗತಿಗಳಲ್ಲಿ ಕಂಡುಬರುತ್ತದೆ: (1) ಯೆಹೂದಕ್ಕೆ ಎಲ್ಲಾ ಕಾಲಗಳಲ್ಲಿ ಒಂದೇ ಒಂದು ರಾಜಧಾನಿಯಿತ್ತು. ಅದು ಯೆರೂಸಲೇಮ್, ದಾವೀದನ ಮತ್ತು ಸೊಲೊಮೋನನ ಪಟ್ಟಣ, ದೇವಾಲಯದ ಪಟ್ಟಣ ಆಗಿತ್ತು. ಇಸ್ರಾಯೇಲಿಗೆ ಒಂದರ ನಂತರ ಒಂದು ಹಲವಾರು ರಾಜಧಾನಿಗಳಿದ್ದವು: ಶೆಕೆಮ್, ತಿರ್ಜ ಮತ್ತು ಸಮಾರ್ಯ. (2) ಇಸ್ರಾಯೇಲು ಕೇವಲ ಎರಡನೂರು ಐವತ್ತು ವರ್ಷ ಮುಂದುವರಿಯಿತು; ಆದಾಗ್ಯೂ ಆ ಸಮಯದಲ್ಲಿ ಹತ್ತೊಂಭತ್ತು ಅರಸುಗಳೊಂದಿಗೆ ಒಂಬತ್ತು ರಾಜವಂಶಗಳು ಸಿಂಹಾಸನದ ಮೇಲೆ ಕುಳಿತು ಕೊಂಡವು. ರಕ್ತದಲ್ಲಿ ತನ್ನನ್ನು ಹೀರಿಕೊಳ್ಳಲ್ಪಡುವುದಕ್ಕೆ ಮಾತ್ರವೇ ಪ್ರತಿಯೊಂದು ಹೊಸ ರಾಜವಂಶವು ರಕ್ತಪಾತದ ಕ್ರಾಂತಿಯಲ್ಲಿ ಪ್ರಾರಂಭ ವಾಯಿತು, ಯೆಹೂದವು ಕೇವಲ ಇಪ್ಪತ್ತು ರಾಜರುಗಳಿಂದ ಸುಮಾರು ನಾಲ್ಕುನೂರು ವರ್ಷಗಳವರೆಗೆ ಬಾಳಿತು. ತಾನೇ ಅಧಿಕಾರ ಸೆಳೆದುಕೊಂಡ ಅತಲ್ಯಳನ್ನು ಹೊರತು ಪಡಿಸಿ ಎಲ್ಲರೂ ದಾವೀದನ ವಂಶಕ್ಕೆ ಒಳಪಟ್ಟವರಾಗಿದ್ದರು.

## II. ನಾಲ್ಕು ಅವಧಿಗಳು.

ಉತ್ತರ ರಾಜ್ಯದ ಚರಿತ್ರೆಯು ಧಾರ್ಮಿಕವಾಗಿ ನಾಲ್ಕು ಸಮಾನ ಅವಧಿಗಳಲ್ಲಿ ವಿಭಾಗಿಸಲ್ಪಡಬಹುದು:

**1. ವಿಗ್ರಹಾರಾಧನೆಯು ಬೇರು ಬಿಡಲ್ಪಡುತ್ತಿತ್ತು; ಐವತ್ತು ವರ್ಷಗಳು, ಮೂರು ರಾಜವಂಶಗಳು, ಐದು ಆಳ್ವಿಕೆಗಳು.**-ಪ್ರಮುಖ ವ್ಯಕ್ತಿಯು ಯಾರೊಬ್ಬಾಮನು, ರಾಜ್ಯದ ಸಂಸ್ಥಾಪಕನು, ತನ್ನ ವಿರೋಧಿ ರಾಜಧಾನಿಯಲ್ಲಿ ಆರಾಧನೆಯ ಒಂದೇ ಕೇಂದ್ರವಾಗಿರುವುದರ ರಾಜ ಕೀಯ ಪರಿಣಾಮದ ಬಗ್ಗೆ ಭಯಪಟ್ಟು, ಉತ್ತರದಲ್ಲಿ ದಾನನ್ನೂ ದಕ್ಷಿಣದಲ್ಲಿ ಬೇತೇಲಿ ನಲ್ಲಿ, ತನ್ನ ಸಾಮ್ರಾಜ್ಯದ ಬಳಿಗೆ ಆಯ್ಕೆ ಮಾಡಿಕೊಂಡನು. ಇವೆರಡೂ ಆಗಲೇ ಪರಿಶುದ್ಧ ಸ್ಥಳಗಳೆಂದು ಪ್ರಸಿದ್ಧಪಡೆದಿದ್ದವು. ಬಸವನ ಪೂಜೆ ಎಂದು ತಿಳಿಯಲ್ಪಟ್ಟಿದ್ದ ವಿಗ್ರಹಾರದನೆಯನ್ನು ಅಲ್ಲಿ ಪ್ರಾರಂಭಿಸಿದನು. ಸಿನಾಯಿ ಬಳಿಯಲ್ಲಿ ಇಸ್ರಾಯೇಲ್ಯರು ಬಿದ್ದುಹೋದ, ಐಗುಪ್ತ ದೇಶದ ಒಂದು ರೀತಿಯ ವಿಗ್ರಹಾರಾಧನೆ ಅದಾಗಿತ್ತು ಎಂಬುದು ಜ್ಞಾಪಿಸಲ್ಪಡುವುದು. ಯಾರೊಬ್ಬಾಮನು ಇತ್ತೀಚೆಗೆ ಐಗುಪ್ತದಲ್ಲಿ ಸೆರೆಯಾಳಾಗಿದ್ದನು. ಅದು ಬಹುಶಃ ಯೆಹೋವನನ್ನು ತ್ಯಜಿಸಿಬಿಡುವುದು ಎಂಬರ್ಥದಲ್ಲಿ ಇಲ್ಲದಿರಬಹುದು, ಆದರೆ ಅದೃಶ್ಯನಾದ ದೇವರ ದೃಶ್ಯರೂಪದ ಉಪಯೋಗ ಆಗಿತ್ತು. ಹಾಗಿದ್ದರೆ, ಅದು ಮೊದಲನೆಯದಕ್ಕಿಂಥ ಎರಡನೆಯ ಆಜ್ಞೆಯನ್ನು ಮೀರುವುದಾಗಿದೆ. ಸೊಲೊಮೋನನ ವಿಗ್ರಹಾರಾಧನೆಗಳು ಅತೀ ಕೆಟ್ಟವುಗಳೆಂದು ತೋರಬಹುದು, ಆದಾಗ್ಯೂ ಪರಿಶುದ್ಧ ಇತಿಹಾಸಕಾರನು ನಡುಗುವಿಕೆಯಿಲ್ಲದೇ ಯಾರೊಬ್ಬಾಮನನ್ನು ಉಲ್ಲೇಖಿಸಲಾರನು. "ನೆಬಾಟನ ಮಗನಾದ ಯಾರೊಬ್ಬಾಮನು ಮಾಡಿದ ಪಾಪಕ್ಕಾಗಿಯೂ, ಇಸ್ರಾಯೇಲ್ಯರು ಪಾಪಮಾಡುವಂತೆ ಮಾಡಿದ್ದಕ್ಕಾಗಿಯೂ"[2] ಎಂಬುದು ಎಂದೆಂದಿಗೂ ಅವನು ಗಲ್ಲಿಗೆ ಹಾಕಲ್ಪಟ್ಟ ಪದಗಳ ರೂಪವಾಗಿದೆ.[3] ಯಾರೊಬ್ಬಾಮನು ಕವಲು ದಾರಿಗಳಿದ್ದನು. ದೈವಿಕ ನೇಮಕದಿಂದ ಅವನು ಒಂದು ರಾಜವಂಶವನ್ನೂ ಒಂದು ರಾಜ್ಯವನ್ನೂ ಸ್ಥಾಪಿಸಲಿಕ್ಕಿದ್ದನು. ಆ ರಾಜವಂಶಕ್ಕೂ ರಾಜ್ಯಕ್ಕೂ ಮಹಿಮೆಯುಳ್ಳ ಅಂತ್ಯಸ್ಥಿತಿಯಿತ್ತು; ಆದರೆ ಅಷ್ಟು, ಅವನು ಅಬ್ರಹಾಮನಾಗಿರಲಿ, ಇಲ್ಲವೇ ಯಾರೊಬ್ಬಾಮನಾಗಲಿ, ಅದರ ಸಂಸ್ಥಾಪಕನ ಮೇಲೆ ಅವಲಂಭಿಸಿರುತ್ತದೆ; ಮತ್ತು ಯಾರೊಬ್ಬಾಮನು ತನ್ನ ರಾಜ ನೀತಿಯಿಂದ, ಅರ್ಧ ಲೌಕಿಕ, ಅರ್ಧ ಧಾರ್ಮಿಕದಿಂದ, ಇಸ್ರಾಯೇಲಿನ ನಿರೀಕ್ಷೆಯನ್ನು

ಎಂದೆಂದಿಗೂ ಒಡೆದು ಹಾಕಿದನು. ಒಂದು ನೂತನ ಯಾಜಕಪದ್ಧತಿಯನ್ನೂ ಧಾರ್ಮಿಕ ಹಬ್ಬಗಳ ಒಂದು ನೂತನ ಪದ್ಧತಿಯನ್ನೂ ಸೃಷ್ಟಿಸಿದನು. ರಾಜ ನೀತಿಯು ಆ ಸಮಯದಲ್ಲಿ ರಾಜಕೀಯವಾಗಿ ಬುದ್ಧಿವಂತಿಕೆಯದೆಂದು ತೋರಿತು, ಆದರೆ ಅಂತ್ಯದಲ್ಲಿ ನಾಶಪಡಿಸುವಂಥದ್ದಾಗಿ ರುಜುವಾತು ಆಯಿತು. ಇಸ್ರಾಯೇಲಿನ ರಾಜಕೀಯ ಸುರಕ್ಷಿತತೆಯು ಅದರ ಧಾರ್ಮಿಕ ಶುದ್ಧತೆಯಲ್ಲಿರುತ್ತದೆ. ಅವಧಿಯಲ್ಲಿಯ ಉಳಿದ ಅರಸರು ನಾದಾಬ್, ಭಾಷ, ಏಲಾ ಮತ್ತು ಜಿಮ್ರಿ. ಇವರಲ್ಲಿ ಕೊನೆಯವನಾದ ಜಿಮ್ರಿಯು ಭಾಷನಂತೆ, ತಾನೇ ಅಧಿಕಾರ ಸೆಳೆದುಕೊಂಡವನಾಗಿದ್ದನು; ಏಳು ದಿನಗಳ ಅಗೌರವದ ಆಳ್ವಿಕೆಯ ನಂತರ ನಾಶವಾಗಿ ಹೋದನು. ಈ ಅವಧಿಯಲ್ಲೆಲ್ಲಾ ಇಸ್ರಾಯೇಲ್ ಮತ್ತು ಯೆಹೂದ ರಾಜ್ಯಗಳು ದೀರ್ಘಕಾಲದ ವಿರೋಧಿಸುವಿಕೆಯಲ್ಲಿದ್ದವು, ಕೆಲವು ಸಲ ಬಹಿರಂಗ ಯುದ್ಧದಲ್ಲಿ ತೊಡಗುತ್ತಿದ್ದವು.

**2. ವಿಗ್ರಹಾರಾಧನೆಯು ಜಯಶಾಲಿಯಾಗಿತ್ತು; ಐವತ್ತು ವರ್ಷಗಳು, ಒಂದು ರಾಜವಂಶ, ನಾಲ್ಕು ಆಳ್ವಿಕೆಗಳು.**-*a. ಒಮ್ರಿ ಮತ್ತು ನೂತನ ರಾಜಧಾನಿ.*-ರಾಜವಂಶದ ಸ್ಥಾಪಕನು ಒಮ್ರಿ ಎಂಬವನು. ಇವನು ಒಂದು ಸೈನ್ಯದ ಅಧಿಕಾರಿ, ಅರಸುತನ ಪಡೆದುಕೊಂಡ ಜಿಮ್ರಿಯನ್ನು ಹೊಡೆದುಹಾಕಿ, ತಿಬ್ನಿ ಎಂಬ ಹೆಸರಿನ ಒಬ್ಬ ಸಾಹಸಿಯ ಮೇಲೆ ಯಶಸ್ವಿಯಾಗಿ ಯುದ್ಧ ಮಾಡುವುದರಿಂದ, ಒಮ್ರಿಯು ಸಿಂಹಾಸನದ ಮೇಲೆ ಭದ್ರವಾಗಿ ಕುಳಿತುಕೊಂಡನು. ಜಿಮ್ರಿಯು ತಿರ್ಚಕ್ಕೆ ಹೋಗಿ ಅಲ್ಲಿ ಅರಮನೆಗೆ ಬೆಂಕಿ ಹಚ್ಚಿ ಸುಟ್ಟುಕೊಂಡು ಸತ್ತು ಹೋದನು. ಒಮ್ರಿಯು ತಿರ್ಚನ್ನು ಹಾಳುಗೆಡವಿದನು ಮತ್ತು ಸಮಾರ್ಯವನ್ನು ಕೊಂಡುಕೊಂಡು ಕಟ್ಟಿದನು. ರಾಜ್ಯವು ಪತನವಾಗುವವರೆಗೆ ಅದು ರಾಜಧಾನಿಯಾಗಿ ಮುಂದುವರಿಯಿತು ಮತ್ತು ಅದರ ಹೆಸರನ್ನು ಒಂದು ಜಿಲ್ಲೆಗೆ ಹಾಗೂ ಅನಂತರದಲ್ಲಿ ಒಂದು ಜನಾಂಗಕ್ಕೆ ಕೊಟ್ಟಿತು.

*b. ಆಹಾಬ; ಈಜೆಬೆಲಳು; ಬಾಳನ ಆರಾಧನೆ.*-ಒಮ್ರಿಯ ಮಗ ಆಹಾಬನು ಚೀದೋನಿನ ಯಾಜಕ - ಅರಸನಾದ ಎತ್ಬಾಳನ ಮಗಳು ಈಜೆಬೆಲಳನ್ನು ಮದುವೆಯಾದನು, ಅನ್ಯ ರಕ್ತ ಮತ್ತು ಧರ್ಮವು ಎರಡೂ ರಾಜ್ಯಗಳಲ್ಲಿ ಹಿಬ್ರೂ ಅರಸರುಗಳ ಹಲವಾರು ಸಂತತಿಗಳಲ್ಲಿ ವಿಷದಂತೆ ಹರಿಯಿತು. ಈಜೆಬೆಲಳು ಅಹಂಕಾರದ ಚಿತ್ತವುಳ್ಳವಳೂ ಧರ್ಮಾಂಧತೆಯ ಆಸಕ್ತಿಯುಳ್ಳವಳೂ ಆದ ಮಹಿಳೆಯಾಗಿದ್ದಳು, ಆಕೆಯ ಹೆಸರು ಸುಮಾರು ಮೂರು ಸಾವಿರ ವರ್ಷಗಳವರೆಗೆ ಸ್ತ್ರೀತ್ವದಲ್ಲಿ ತಿರಸ್ಕರಿಸಲ್ಪಡುವ ಎಲ್ಲದಕ್ಕೂ ಏಕಾರ್ಥ ಪದವಾಗಿತ್ತು. ಆಕೆ ವಿಷಯಲಂಪಟ ಬಾಳನ ಆರಾಧನೆಯನ್ನು ಪರಿಚಯಿಸಿದಳು ಮತ್ತು ಜನರಲ್ಲಿ ವ್ಯಾಪಿಸಿಕೊಂಡಿದ್ದ ಯೆಹೋವನ ಆರಾಧನೆಯನ್ನು ಕಿತ್ತು ಹಾಕುವ ರೀತಿಯಲ್ಲಿ ಉಗ್ರ ಹಿಂಸೆಯನ್ನು ಪ್ರಾರಂಭಿಸಿದಳು.

*c. ಎಲೀಯನ ಕಾಲ.*-ಅವಧಿಯ ಒಂದು ವಿಶೇಷ ಲಕ್ಷಣವು ಪ್ರವಾದಿ ಎಲೀಯನು, ಆಹಾಬನ ಪಾಪಗಳನ್ನು ಅವನು ಬಹಿರಂಗವಾಗಿ ಎದುರಿಸಿದನು; ಜನಾಂಗಿಕ ಧರ್ಮಭ್ರಷ್ಟತೆಗೆ ಶಿಕ್ಷೆಯಂತೆ ಮೂರು ವರ್ಷಗಳ ಕ್ಷಾಮವನ್ನು ಮುಂತಿಳಿಸಿದನು; ಕೇರಿತ್ ಹಳ್ಳದ ಬಳಿಯಲ್ಲಿ ಕಾಗೆಗಳಿಂದ ಆಹಾರ ಪಡೆದನು ಮತ್ತು ಅನಂತರದಲ್ಲಿ ಈಜೆಬೆಲಳ ಸ್ವಂತ ನಾಡಿನಲ್ಲಿಯ ಚಾರೆಪ್ತದ ವಿಧವೆಯಿಂದ ಉಪಚರಿಸಲ್ಪಟ್ಟನು; ಅಂತಿಮವಾಗಿ ಪುನಃ ಆಹಾಬನನ್ನು ಎದುರಿಸಿದನು. ಕಾರ್ಮೆಲ್ ಬೆಟ್ಟದಲ್ಲಿ ಜನರನ್ನು ಕೂಡಿಸಿದನು. ಬಾಳನ ಮತ್ತು ಆಶೇರನ ನೂರಾರು ಯಾಜಕ - ಪ್ರವಾದಿಗಳಿಗೆ ಪರೀಕ್ಷೆಯನ್ನು ಸೂಚಿಸಿದನು; ಬೆಂಕಿಯಿಂದ ಉತ್ತರ ಕೊಟ್ಟ ದೇವರು ಜನಾಂಗದ ದೇವರಾಗಿರುವನು. ಎಲೀಯನ ಯಜ್ಞವನ್ನು ಬಹಿಸಿದ ದೈವಿಕ ಉತ್ತರದ ವಿಗ್ರಹಾರಾಧಕರು ಭಯಗೊಂಡರು. ಸುಳ್ಳು ಪ್ರವಾದಿಗಳು ನಾಶಪಡಿಸಲ್ಪಟ್ಟರು. ಎಲೀಯನ ಪ್ರಾರ್ಥನೆಗೆ ಉತ್ತರವಾಗಿ ಬಿರುಗಾಳಿಯಿಂದ

ಕೂಡಿದ ರಭಸದ ಮಳೆ ಬಂದಿತು. ಆಹಾಬರ ರಥದ ಮುಂದೆ ಎಲೀಯನು ಇಜ್ರೇಲಿಗೆ ಓಡುತ್ತಾ ಹೋದನು, ಆದರೆ ಕೋಪಗೊಂಡ ಈಜೆಬೆಲಳು ಎಲೀಯನಿಗೆ ಭಯಪಡಿಸುವ ಪತ್ರವನ್ನು ಕಳುಹಿಸಿದಳು, ಅವನು ಹೋರೇಬಿಗೆ ಓಡಿಹೋದನು. ಅಲ್ಲಿ ನಿರಾಶನಾದ ಪ್ರವಾದಿಯನ್ನು ದೇವರು ಸಂದರ್ಶಿಸಿದನು. ಬಾಳನಿಗೆ ಅಡ್ಡಬೀಳದ ಏಳು ಸಾವಿರ ಜನರ ಗುಂಪು, "ಇಸ್ರಾಯೇಲನೊಳಗೆ ಇಸ್ರಾಯೇಲು" ಇರುವುದೆಂದು ಅವರಿಗೆ ಹೇಳಿದನು ಮತ್ತು ತನ್ನ ಕಾರ್ಯವನ್ನು ಮುಗಿಸಲು ಅವನನ್ನು ಹಿಂದಿರುಗಿ ಕಳುಹಿಸಿದನು. ಎಲೀಯನು ಹಿಂದಿರುಗಿದನು, ತನ್ನ ಬದಲಾಗಿ ಎಲೀಷನನ್ನು ಪ್ರವಾದಿಯಾಗಿರಲು ಅಭಿಷೇಕಿಸಿದನು, ಆಹಾಬನ ಮನೆತನದ ನಾಶನವನ್ನು ಪ್ರಕಟಿಸಿದನು, ಮತ್ತು ಅನಂತರ ಬೇಗನೇ ಬೆಂಕಿಯ ರಥದಲ್ಲಿ ಪರಲೋಕಕ್ಕೆ ಒಯ್ಯಲ್ಪಟ್ಟನು. ಈ ಮಧ್ಯೆ ಒಮ್ರಿ ಮತ್ತು ಆಹಾಬನ ರಾಜವಂಶಗಳು ಉಗ್ರನಾದ ಯೋಹುವಿನಿಂದ ರಕ್ತದಲ್ಲಿ ಇಲ್ಲವಾಗಿ ಹೋದವು. ಮೋಶೆಯ ನಂತರ, ಬೇರೆ ಯಾವುದೇ ಪ್ರವಾದಿಯು ತಮ್ಮ ಎಲ್ಲಾ ಚರಿತ್ರೆಯಲ್ಲಿ ಹಿಬ್ರೂ ಮನಸ್ಸಿನ ಮೇಲೆ ಅಷ್ಟು ಪ್ರಭಲವಾದ ಪ್ರಭಾವವನ್ನು ಬಿಟ್ಟಿರುವುದಿಲ್ಲ. ಅವನ ಹೆಸರಿನ ಬಗ್ಗೆ ಸಂಗ್ರಹಿಸಲ್ಪಟ್ಟ ದಂತ ಕಥೆಗಳು ಮತ್ತು ಜ್ಞಾನೋಕ್ತಿಗಳು ಮತ್ತು ಅವನ ಹಿಂದಿರುಗುವಿಕೆಯು ಹಳೇ ಒಡಂಬಡಿಕೆಯ ಕೊನೆಯ ಪ್ರವಾದಿಯಿಂದ ಮತ್ತು ಹೊಸ ಒಡಂಬಡಿಕೆಯ ಜನರಿಂದ ಮುನ್ನೋಡಲ್ಪಟ್ಟಿದೆ. ಆದಾಗ್ಯೂ ಅವನು ನಮಗೆ ಬಂದಿರುವ ಯಾವುದನ್ನೂ ಅವನು ಬರೆದಿರುವುದಿಲ್ಲ ಅಥವಾ ಹೇಳಿರುವುದಿಲ್ಲ. ಅವನ ದೊಡ್ಡ ಪ್ರತಿಬಿಂಬದಂತಿದ್ದ ಸ್ನಾನಿಕನಾದ ಯೋಹಾನನಂತೆ, ಅವನು ಮಾತನಾಡಿದ್ದಲ್ಲ ಆದರೆ ಅವನು ಮಾಡಿದ್ದು ಹಿಬ್ರೂ ಪ್ರವಾದಿಗಳ ಸಾಲಿನಲ್ಲಿ ಅವನಿಗೆ ದೊಡ್ಡ ಸ್ಥಾನಕೊಟ್ಟಿದೆ.

*d. ರಾಜಕೀಯ ಸಂಬಂಧಗಳು.*-ಆಹಾಬನ ಮನೆತನದ ಉಳಿದ ಅರಸರುಗಳು ಅಹಜ್ಯ ಮತ್ತು ಯೆಹೋರಾಮ. ಯೆಹೂದದ ಕಡೆಗೆ ವಿರೋಧವು ಆಹಾಬನ ಆಳ್ವಿಕೆಯ ಅನಂತರದ ಅರ್ಧ ಭಾಗದವರೆಗೆ ಮುಂದುವರಿಯಿತು. ಆಗ ಸಿರಿಯಕ್ಕೆ ವಿರುದ್ಧವಾಗಿ ಒಪ್ಪಂದವು ಮಾಡಿಕೊಳ್ಳಲ್ಪಟ್ಟಿತು ಮತ್ತು ಎರಡು ರಾಜಕುಟುಂಬಗಳ ಮಧ್ಯದಲ್ಲಿ ಅಂತರ್ವಿವಾಹದ ಮೂಲಕ ಭದ್ರಪಡಿಸಲ್ಪಟ್ಟಿತು. ಸಿರಿಯಾದೊಂದಿಗೆ ಯುದ್ಧಗಳು ಮೇಲಿಂದ ಮೇಲೆ ಆಗುತ್ತಿದ್ದವು ಮತ್ತು ಮೊವಾಬು ಅದರ ಅವಲಂಭನೆಯನ್ನು ತೆಗೆದು ಹಾಕಿತು, ಅದು ದಾವೀದನ ಸಮಯದಿಂದ ಮುಂದುವರಿದಿತ್ತು. ಒಂದು ಕುತೂಹಲ ಭರಿತ ಪಕ್ಕದ ಬೆಳಕು ಈ ಅವಧಿಯ ಮೇಲೆ ಮೋವಾಬೈಟ ಸ್ಟೋನದಿಂದ ಚೆಲ್ಲಲ್ಪಟ್ಟಿದೆ.[4] ದೂರದ ಅಸ್ಸಿರಿಯವು, ಮೆಡಿಟೇರಿನಿಯನ್ ಭಾಗದಲ್ಲಿ ಒಮ್ಮೆ ಬಲಶಾಲಿಯಾಗಿದ್ದು, ಒಂದು ನೂರಐವತ್ತು ವರ್ಷಗಳವರೆಗೆ ಪ್ರಸಿದ್ಧಿಯಲ್ಲಿ ಇಲ್ಲದ್ದು ಈಗ ಬೇಗನೇ ಪಶ್ಚಿಮದ ಅನೇಕ ಚಿಕ್ಕ ರಾಜ್ಯಗಳನ್ನು ನುಂಗುವಷ್ಟು ಚಟುವಟಿಕೆಯುಳ್ಳದ್ದಾಯಿತು. ಈ ಸಮಯಕ್ಕೆ ಅಸ್ಸೀರಿಯದ ಶಿಲಾಲೇಖನಗಳು ನಮ್ಮ ಕಥೆಯ ಮೇಲೆ ಪುನಃ ಪುನಃ ಬೆಳಕು ಚೆಲ್ಲುತ್ತವೆ.

**3. ವಿಗ್ರಹಾರಾಧನೆ ನಿಯಂತ್ರಿಸಲ್ಪಟ್ಟಿದ್ದು; ಒಂದು ನೂರು ವರ್ಷಗಳು, ಒಂದು ರಾಜವಂಶ, ಐದು ಆಳ್ವಿಕೆಗಳು.**-ಇದು ಚಿಕ್ಕ ರಾಜ್ಯದ ಅತಿದೊಡ್ಡ ಸಮೃದ್ಧಿಯ ಅವಧಿಯಾಗಿತ್ತು; ಆದರೆ ಅದು ಜ್ವಾಲೆಯ ಕೊನೆಯ ಮಿನುಗುವ ಜ್ವಾಲೆಯಾಗಿತ್ತು, ಇಸ್ರಾಯೇಲಿನ "ಇಂಡಿಯನ್ ಬೇಸಿಗೆಯ ಕಾಲ"ವಾಗಿತ್ತು. ಎಲೀಷನು ಎಲೀಯನಿಗಿಂತ ಹೆಚ್ಚು ಉತ್ತಮ ಯಶಸ್ಸಿನಿಂದ ಸುಧಾರಣೆಯ ಕೆಲಸವನ್ನು ತೆಗೆದುಕೊಂಡನು. ರಾಜವಂಶದ ಸ್ಥಾಪಕನಾದ ಯೇಹುವು ಕ್ರಾಂತಿಯ ಸುಳಿಯಲ್ಲಿ ಆಹಾಬನ ಮನೆತನವನ್ನು ನಿರ್ಮೂಲ ಮಾಡಿದನು, ಮತ್ತು ಅದರೊಂದಿಗೆ ಬಾಳನ ಆರಾಧನೆಯನ್ನು ನಿರ್ಮೂಲ ಮಾಡಿದನು; ಆದರೆ ಅವನು ಯಾರೊಬ್ಬಾಮನ ಚಿನ್ನದ ಬಸವ ಪೂಜೆಯನ್ನು ಪುನಃ ಪ್ರಾರಂಭಿಸಿದನು.

ಯೆಹೋವಾಹಾಜ, ಯೆಹೋವಾಷ. ಎರಡನೆಯ ಯಾರೊಬ್ಬಾಮನು, ಮತ್ತು ಜೆಕರೀಯನು ಅವನ ನಂತರ ಅರಸರಾದರು. ಎರಡನೆಯ ಯಾರೊಬ್ಬಾಮನು ನಾಲ್ವತ್ತೊಂದು ವರ್ಷ ಆಳಿದನು, ಮತ್ತು ರಾಜ್ಯವನ್ನು ಅದರ ಅತಿದೊಡ್ಡ ಬಲಕ್ಕೇರಿಸಿದನು. ತನ್ನ ಸೇವೆಗಾಗಿ ನಿನೆವೆಗೆ ಕಳುಹಿಸಿಲ್ಪಟ್ಟ ಪ್ರವಾದಿ ಯೋನನು ಅವನಿಗೆ ಸಹಾಯಕನಾಗಿದ್ದನು, ಈಗ ಅದು ಪಶ್ಚಿಮ ಏಶಿಯಾದಲ್ಲಿ ಉನ್ನತಿಗೇರುತ್ತಿತ್ತು. ಪ್ರವಾದಿ ಹೋಶೇಯನೂ ಸಹ ಇಸ್ರಾಯೇಲಿನಲ್ಲಿ ವಿಗ್ರಹಾರಾಧನೆಗಳಿಗೆ ವಿರುದ್ಧವಾಗಿ ತನ್ನ ಧ್ವನಿಯೆತ್ತಿದನು.

**4. ವಿಗ್ರಹಾರಾಧನೆ ನಾಶನದಲ್ಲಿ ಅಂತ್ಯಗೊಂಡಿದ್ದು; ಐವತ್ತು ವರ್ಷಗಳು, ನಾಲ್ಕು ರಾಜವಂಶಗಳು, ಐದು ಆಳ್ವಿಕೆಗಳು.**-ಶಲ್ಲೂಮ, ಮೆನಹೇಮ, ಪೆಕಹ್ಯ, ಪೆಕಹ ಮತ್ತು ಹೋಶೇಯ ಅರಸರಾಗಿದ್ದರು. ಅವರಲ್ಲಿ ಕೆಲವರು ಅಸ್ಸೀಲಿಯದ ಕೇವಲ ಕೈಗೊಂಬೆಗಳಾಗಿದ್ದರು. ಮನೆಹೋನನ ಆಳ್ವಿಕೆಯಲ್ಲಿ ಅಸ್ಸೀಲಿಯನ್ನರು ಸೆರೆ ಒಯ್ಯುವ ಕಾರ್ಯವನ್ನು ಪ್ರಾರಂಭಿಸಿದರು. ಬಲವುಳ್ಳ ಅರಸ ಪೆಕಹನು ಅಸ್ಸೀಲಿಯ ಮತ್ತು ಚಿಕ್ಕ ಯೆಹೂದಕ್ಕೆ ವಿರುದ್ಧವಾಗಿ ಸಿಲಿಯದೊಂದಿಗೆ ಒಪ್ಪಂದ ಮಾಡಿಕೊಂಡನು. ಯೆಹೂದನು ಅಸ್ಸೀಲಿಯಕ್ಕೆ ಕಪ್ಪಕೊಡುತ್ತಿತ್ತು ಅಸ್ಸೀಲಿಯ ಎರಡನೆಯ ತಿಗ್ಲತ್ಪಿಲೆಸೆರನೆಂಬವನು ಸಿಲಿಯ ರಾಜ್ಯಕ್ಕೆ ಅಂತ್ಯಹಾಕಿದನು. ಮತ್ತು ಇಸ್ರಾಯೇಲು ದೊಡ್ಡ ಮೊತ್ತದ ಕಪ್ಪಕೊಡುವಂತೆ ಮಾಡಿದನು. ಅಸ್ಸೀಲಿಯದ ನೊಗದಿಂದ ಹೋಶೇಯನು ದಂಗೆಯೆದ್ದಾಗ ಅಂತ್ಯವು ಬಂದಿತು. ನಾಲ್ಕನೆಯ ಶಲ್ಮನೇಜರನು ದೇಶದ ಮೇಲೆ ದಾಳಿಮಾಡಿ, ಸಮಾರ್ಯಕ್ಕೆ ಮುತ್ತಿಗೆ ಹಾಕಿದನು. ಇದು ಮೂರು ವರ್ಷಗಳವರೆಗೆ ಆಯಿತು, ಈ ಸಮಯದಲ್ಲಿ ಅಸ್ಸೀಲಿಯ ಸಿಂಹಾಸನದ ಮೇಲೆ ಸಾರ್ಗೋನನು ಶಲ್ಮನೇಜರನ ಉತ್ತರಾಧಿಕಾರಿಯಾದನು. ಮುತ್ತಿಗೆಯನ್ನು ಪೂರ್ತಿಗೊಳಿಸಿ, ಸಮಾರ್ಯವನ್ನು ವಶಪಡಿಸಿಕೊಂಡು, ಹತ್ತು ಕುಲಗಳವರನ್ನು ಸೆರೆಯಾಗಿ ತೆಗೆದುಕೊಂಡು ಹೋದನು, ಅಲ್ಲಿಂದ ಅವರು ಎಂದಿಗೂ ಹಿಂದಿರುಗಿ ಬರಲೇ ಇಲ್ಲ. ಯೆಹೋವನಿಗೆ ಮತ್ತು ತಮ್ಮ ಜಾನಾಂಗಿಕ ಕಾರ್ಯಕ್ಕೆ ಅಸತ್ಯವಂತರಾಗಿ, ಅವರು ಎಂದೆಂದಿಗೂ ತಮ್ಮ ಜನಾಂಗಿಕ ಗುರುತನ್ನು ಕಳೆದು ಕೊಂಡರು. ಹತ್ತು ಕುಲದವರಲ್ಲಿ ಉಳಿದವರೊಂದಿಗೆ ಮಿಶ್ರವಾಗಿ ಅಸ್ಸೀಲಿಯನ್‌ರು ದೇಶದೊಳಗೆ ಆಮದು ಮಾಡಿಕೊಂಡರು. ಈ ಮಿಶ್ರ ಕುಲವು, ಮೊಂಗ್ರೆಲ್; ಧರ್ಮದೊಂದಿಗೆ ಶತಮಾನಗಳವರೆಗೆ ಮುಂದುವಲಿಯಿತು ಮತ್ತು ಕ್ರಿಸ್ತನ ಕಾಲದ ಸಮಾರ್ಯದವರನ್ನು ರಚಿಸಿತು.

---

ಟಿಪ್ಪಣೆಗಳು

[1]ನೋಡಿರಿ, ಯೆಹೋಶುವ 17:14-18; ನ್ಯಾಯಸ್ಥಾಪಕರು 8:1-3; 12:1-6. [2]1 ಅರಸುಗಳು 14:16. [3]ಯಾರೊಬ್ಬಾಮನು ಹೀಗೆ ಬಹಿರಂಗವಾಗಿ ನಾಚಿಕೆಪಡಿಸಲ್ಪಟ್ಟನು. [4]ನೋಡಿರಿ ಎಡರ್ಸ್‌ಹೈಮ್, "Hist. of Israel and Judah," Vol. VI., pp. 112-117.

© 2009 Truth for Today